**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೇಶವ ಪ್ರಸಾದ್.ಎಸ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು</u>**

**ಪ್ರಶ್ನೆ:** ವಿಜಯಪುರ ಜಿಲ್ಲೆ ದ್ರಾಕ್ಷಿ ಬೆಳೆಗೆ ಹೆಸರುವಾಸಿಯಾಗಿದೆ. ಈ ಜಿಲ್ಲೆಯೊಂದರಲ್ಲೇ ಸುಮಾರು 20 ಸಾವಿರ ಹೆಕ್ಟೇರ್ ಗೂ ಹೆಚ್ಚು ಪ್ರದೇಶದಲ್ಲಿ ರಫ್ತು ಗುಣಮಟ್ಟದ ದ್ರಾಕ್ಷಿ ಬೆಳೆ ಬೆಳೆಯುತ್ತಿದ್ದಾರೆ. ದ್ರಾಕ್ಷಿಯು ಔಷಧಿಯ ಗುಣಹೊಂದಿದ್ದು, ಸುಮಾರು 20ಕ್ಕೂ ಹೆಚ್ಚು ತರಹದ ರೋಗಗಳಿಗೆ ಇದು ರಾಮಬಾಣವಾಗಿದೆ. ಅಲ್ಲದೆ ಇದರಲ್ಲಿ ಪೋಷಕಾಂಶಗಳಾದ ವಿಟಾಮಿನ್-ಬಿ6, ವಿಟಾಮಿನ್-ಸಿ, ಗ್ಲುಕೋಸ್, ಕ್ಯಾಲ್ಸಿಯಂ, ಮ್ಯಾಗ್ನೆಶಿಯಂ, ಐರನ್ ಸೇರಿದಂತೆ ಹಲವಾರು ವಿಟಾಮಿನ್ ಅಂಶಗಳ ಆಗರವಾಗಿದೆ.

ದ್ರಾಕ್ಷಿ ಬೆಳೆಯಲು 1 ಹೆಕ್ಟೇರ್ ಗೆ ಸುಮಾರು 3 ಲಕ್ಷಕ್ಕಿಂತಲೂ ಹೆಚ್ಚು ಖರ್ಚಾಗುತ್ತಿದ್ದು, ಇದರ ಮಧ್ಯೆ ಗಗನಕ್ಕೇರಿದ ಸಿಂಪಡಿಕೆಯ ಔಷಧಿಗಳ ಬೆಲೆ ಮತ್ತು ದಿನನಿತ್ಯದ ಕೂಲಿ ಕಾರ್ಮಿಕರ ಕೊರತೆ, ದಿನನಿತ್ಯದ ಪಗಾರ, ಅಲ್ಲದೇ ನೈಸರ್ಗಿಕವಾಗಿ ಅತಿವೃಷ್ಠಿ, ಅನಾವೃಷ್ಟಿ, ಅಕಾಲಿಕ ಮಳೆ, ವ್ಯತಿರಿಕ್ತ ವಾತಾವರಣವೂ ಸೇರಿದಂತೆ, ಹಲವಾರು ಕಾರಣಗಳಿಂದ ಇಂದು ದ್ರಾಕ್ಷಿ ಬೆಳೆಗಾರರು ತುಂಬಾ ಸಂಕಷ್ಟದಲ್ಲಿದ್ದಾರೆ.

ದ್ರಾಕ್ಷಿ ಸಂಸ್ಕರಣೆ, ಸಾಗಾಣಿಕೆ ಮತ್ತು ಶೀತಲ ಘಟಕಗಳ ಅಧಿಕ ವೆಚ್ಚಗಳ ನಡುವೆಯೂ, ದ್ರಾಕ್ಷಿಯ ಬೆಲೆ ಕುಸಿತದಿಂದ ರೈತರು ತುಂಬಾ ಕಂಗಾಲಾಗಿದ್ದಾರೆ. ಒಂದೆಡೆ ಸಾಲ, ಇನ್ನೊಂದೆಡೆ ಬೆಳೆದ ಬೆಳೆಗೆ ಸರಿಯಾದ ಬೆಲೆ ಇಲ್ಲದಿರುವುದರಿಂದ ಸಾಲದ ಹೊರೆಯು ರೈತನನ್ನು ಸಾವಿನೆಡೆಗೆ ತಂದು ನಿಲ್ಲಿಸುತ್ತಿರುವ ಘಟನೆಗಳು ದಿನನಿತ್ಯ ಜರುಗುತ್ತಿವೆ.

ಸಂಕಷ್ಟದಲ್ಲಿರುವ ದ್ರಾಕ್ಷಿ ಬೆಳೆಗಾರರ ಹಿತಕ್ಕೆ ತಕ್ಷಣವೇ ಸರ್ಕಾರ ಮುಂದಾಗಬೇಕು, ಒಣ ದ್ರಾಕ್ಷಿಗೆ 1 ಕೆಜಿಗೆ 200 ರೂ. ನಂತೆ ಬೆಂಬಲ ಬೆಲೆಯ ಸಹಾಯಧನ ಘೋಷಿಸಬೇಕು. ಸರ್ಕಾರಗಳ ಏಜನ್ಸಿಗಳಿಂದಲೇ ದ್ರಾಕ್ಷಿಗಳನ್ನು ಖರೀದಿಸಬೇಕು. ಜೊತೆಗೆ ತೋಟಗಾರಿಕೆ ಬೆಳೆಗಳಿಗೆ ಸಿಂಪಡಿಸುವ ಔಷಧಿಗಳಿಗೂ ಕೂಡ ಸಬ್ಸಿಡಿ ಒದಗಿಸಿದರೆ ದ್ರಾಕ್ಷಿ ಬೆಳೆಗಾರರಿಗೆ ಇದು ಸಹಾಯವಾಗುತ್ತದೆ. ಅಲ್ಲದೆ ಒಣದ್ರಾಕ್ಷಿಯಲ್ಲಿ ವಿಟಾಮಿನ್ ಹೇರಳವಾಗಿರುವುದರಿಂದ ಶಾಲಾ-ಮಕ್ಕಳು ಒಣ ದ್ರಾಕ್ಷಿ ಸೇವಿಸುವುದರಿಂದ ಮಕ್ಕಳಲ್ಲಿ ಜ್ಞಾಪಕ ಶಕ್ತಿಯೂ ಕೂಡ ವೃದ್ಧಿಯಾಗುತ್ತದೆ.

ಈಗಾಗಲೇ ನೆರೆಯ ಮಹಾರಾಷ್ಟ್ರ ಸರ್ಕಾರವು ಪ್ರತಿನಿತ್ಯ ಅಲ್ಲಿನ ಅಂಗನವಾಡಿ, ಸರ್ಕಾರಿ, ಮೊರಾರ್ಜಿ, ಸೈನಿಕ ಶಾಲೆಗಳು ಸೇರಿದಂತೆ ಸರಕಾರಿ ಆಸ್ಪತ್ರೆ ರೋಗಿಗಳಿಗೆ ಕನಿಷ್ಠ 50 ಗ್ರಾಂ ಒಣ ದ್ರಾಕ್ಷಿಯನ್ನು ನೀಡುತ್ತಿದ್ದಾರೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರವು ಸರ್ಕಾರಿ ಶಾಲಾ-ಮಕ್ಕಳಿಗೆ ಒಣ ದ್ರಾಕ್ಷಿಯನ್ನು ನೀಡುವ ಬಗ್ಗೆ ಚಿಂತನೆ ನಡೆಸಬೇಕು ಇದರಿಂದ ಸ್ಥಳೀಯ ದ್ರಾಕ್ಷಿ ಬೆಳೆಗಾರರಿಗೆ ಅನುಕೂಲವಾಗುತ್ತದೆ ಮತ್ತು ಸರ್ಕಾರಿ, ಅನುದಾನಿತ ಶಾಲಾ-ಮಕ್ಕಳಿಗೆ, ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೂ ಇದು ಆರೋಗ್ಯಕ್ಕೆ ಅನುಕೂಲವಾಗಲಿದೆ ಎಂಬುದು ನಮ್ಮ ಆಶಯವಾಗಿದೆ.

ಆದ್ದರಿಂದ ರಾಜ್ಯ ಸರ್ಕಾರ ತಕ್ಷಣವೇ ಸಂಕಷ್ಟದಲ್ಲಿರುವ ದ್ರಾಕ್ಷಿ ಬೆಳೆಗಾರರ ಹಿತರಕ್ಷಣೆಗೆ ಮುಂದಾಗಬೇಕು, ದ್ರಾಕ್ಷಿಗೆ ಬೆಂಬಲ ಬೆಲೆ ಹೆಚ್ಚಿಸಬೇಕು, ದ್ರಾಕ್ಷಿ ಬೆಳೆಗಾರರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸಿರುವ ಬಗ್ಗೆ.

**ಉತ್ತರ:** ದ್ರಾಕ್ಷಿ ಬೆಳೆಯನ್ನು ರಾಜ್ಯದಲ್ಲಿ 32,473 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಉತ್ಪಾದನೆಯು 8.21 ಲಕ್ಷ ಮೆಟ್ರಿಕ್ ಟನ್ ಇರುತ್ತದೆ. ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳು ಇದರಲ್ಲಿ ಸಿಂಹಪಾಲನ್ನು ಹೊಂದಿದ್ದು ಒಟ್ಟು 25,637 (ಶೇ. 78) ಹೆಕ್ಟೇರ್ ಪ್ರದೇಶವನ್ನು ಹೊಂದಿವೆ. ಈ ಜಿಲ್ಲೆಗಳಲ್ಲಿ ಬೆಳೆಯಲಾಗುವ ದ್ರಾಕ್ಷಿ ಬೆಳೆಯ ಶೇ 90 ರ ಉತ್ಪನ್ನವನ್ನು ಒಣದ್ರಾಕ್ಷಿಯನ್ನಾಗಿ ಮಾರ್ಪಾಡು ಮಾಡಲಾಗುತ್ತಿದೆ. ಸದರಿ ಜಿಲ್ಲೆಗಳಲ್ಲಿನ ಒಟ್ಟು ವಾರ್ಷಿಕ ಒಣ ದ್ರಾಕ್ಷಿ ಉತ್ಪಾದನೆ 1.25 ಲಕ್ಷ ಮೆಟ್ರಿಕ್ ಟನ್ ಇರುತ್ತದೆ.

- ಒಂದು ಕೆ.ಜಿ. ಒಣ ದ್ರಾಕ್ಷಿಯನ್ನು ಉತ್ಪಾದಿಸಲು ಸರಾಸರಿ 5 ಕೆ.ಜಿ.ಯಷ್ಟು ತಾಜಾ ದ್ರಾಕ್ಷಿಯ ಅವಶ್ಯಕತೆ ಇದ್ದು, ಪ್ರತಿ ಕ್ವಿಂಟಾಲ್ ಒಣ ದ್ರಾಕ್ಷಿ ಉತ್ಪಾದನೆಗೆ ಅಂದಾಜು ರೂ 10,431 ಗಳು ವೆಚ್ಚವಾಗುತ್ತದೆ. ಒಣ ದ್ರಾಕ್ಷಿಯ ಗುಣಮಟ್ಟವನ್ನು ನಿರ್ವಹಿಸಲು ಮತ್ತು ಉತ್ತಮ ಮಾರುಕಟ್ಟೆ ಬೆಲೆ ಪಡೆಯಲು ಶೀತಲ ಗೃಹಗಳಲ್ಲಿ ಸಂಗ್ರಹಿಸಿಡುವ ಅವಶ್ಯಕತೆ ಇದೆ. ರೈತರ ಅನುಕೂಲಕ್ಕಾಗಿ ಸಾರ್ವಜನಿಕ ಹಾಗೂ ಖಾಸಗಿ ಒಡೆತನದ ಶೀತಲ ಗೃಹಗಳಿದ್ದು, ವಿವರ ಕೆಳಗಿನಂತಿದೆ.

| ಸಂ | ಜಿಲ್ಲೆಯ ಹೆಸರು | ಶೀತಲ ಗೃಹಗಳ ಸಂಖ್ಯೆ | ಸಾಮರ್ಥ್ಯ (ಮೆಟ್ರಿಕ್ ಟನ್) |
|---|---|---|---|
| 1 | ವಿಜಯಪುರ | 31 | 38355 |
| 2 | ಬಾಗಲಕೋಟೆ | 05 | 5865 |
| 3 | ಬೆಳಗಾವಿ | 06 | 5015 |
| | ಒಟ್ಟು | 42 | 49235 |

- ಈ ಶೀತಲ ಗೃಹಗಳಲ್ಲಿ ಒಣ ದ್ರಾಕ್ಷಿಯನ್ನು ಸಂಗ್ರಹಿಸಿಟ್ಟುಕೊಂಡು, ಮಾರುಕಟ್ಟೆಯಲ್ಲಿ ದರದ ಪರಿಸ್ಥಿತಿ ಉತ್ತಮವಿರುವಾಗ ಬೆಳೆಗಾರರು ಮಾರಾಟ ಮಾಡಲು ಸಹಕಾರಿಯಾಗಿದೆ. ಕರ್ನಾಟಕದಲ್ಲಿ ಉತ್ಪಾದಿಸಲಾಗುವ ಒಣ ದ್ರಾಕ್ಷಿಗೆ ಪ್ರಮುಖ ಮಾರುಕಟ್ಟೆಗಳೆಂದರೆ ಕರ್ನಾಟಕದ ವಿಜಯಪುರ ಹಾಗೂ ಮಹಾರಾಷ್ಟ್ರದ ತಸಗಾಂವ್ ಮತ್ತು ಸಾಂಗ್ಲಿ.
- ಪ್ರಸ್ತುತ ವರ್ಷದಲ್ಲಿ ಒಣ ದ್ರಾಕ್ಷಿ ಮಾರುಕಟ್ಟೆ ದರವು ಕಡಿಮೆ ಇರುವುದನ್ನು ಗಮನಿಸಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ರವರ ಅನ್ವಯ ಮಾದರಿ ಬೆಲೆಯು ಸರಾಸರಿ ಪ್ರತಿ ಕ್ವಿಂಟಾಲ್ ಗೆ ರೂ.9100.00 ಇರುತ್ತದೆ. ಹೆಚ್ಚಿನ ಪ್ರದೇಶದಲ್ಲಿ ದ್ರಾಕ್ಷಿ ಬೆಳೆ ಬೇಸಾಯ ಮಾಡಿದ್ದು, ಹೆಚ್ಚಿನ ಉತ್ಪಾದನೆಯಾಗಿರುವುದು ಬೆಲೆ ಕಡಿಮೆಯಾಗಲು ಕಾರಣವಾಗಿದೆ. ಈ ರೀತಿಯ ಪರಿಸ್ಥಿಯಲ್ಲಿ ಸಹಕಾರ ಇಲಾಖೆ ಮುಖೇನ ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆ ನೀಡುವಂತೆ ಸೂಕ್ತ ಮನವಿಯನ್ನು ಸಲ್ಲಿಸಲಾಗುವುದು.

- ರಾಜ್ಯ ವಲಯ ಯೋಜನೆಯಾದ "ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಕಾರ್ಯಕ್ರಮ" ಅಡಿ ದ್ರಾಕ್ಷಿ ಬೆಳೆಯನ್ನೊಳಗೊಂಡಂತೆ ಎಲ್ಲಾ ತೋಟಗಾರಿಕೆ ಬೆಳೆಗಳಲ್ಲಿ ರೋಗ/ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಸಾಮಾನ್ಯ

ವರ್ಗದವರಿಗೆ ಶೇ. 75 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.7500/- ರಂತೆ ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಶೇ. 90 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.9000/- ರಂತೆಗರಿಷ್ಟ 1 ಹೆಕ್ಟೇರ್ ರವರೆಗೆ ಪ್ರತಿ ಫಲಾನುಭವಿಗೆ ಸಹಾಯಧವನ್ನು ನೀಡಲಾಗುತ್ತಿದೆ.

- ಕೇಂದ್ರ ವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಕೈಗೊಳ್ಳಲು ಪ್ರತಿ ಹೆಕ್ಟೇರ್ ಘಟಕ ವೆಚ್ಚ ರೂ.4000/- ರಂತೆ ಪ್ರತಿ ಹೆಕ್ಟೇರಿಗೆ ಶೇ.30 ರಷ್ಟು ಅಂದರೆ ರೂ.1200/- ರಂತೆ ಗರಿಷ್ಟ 4 ಹೆಕ್ಟೇರ್ ರವರೆಗೆ ಸಹಾಯಧವನ್ನು ನೀಡಲಾಗುತ್ತಿದೆ.

- ಮುಂದುವರೆದು ನೈಸರ್ಗಿಕವಾಗಿ ಅತಿವೃಷ್ಠಿ, ಅನಾವೃಷ್ಟಿ, ಅಕಾಲಿಕಮಳೆ, ವ್ಯತಿರಿಕ್ತ ವಾತಾವರಣ ವೂಸೇರಿದಂತೆ, ಹಲವಾರು ಕಾರಣಗಳಿಂದ ಬೆಳೆ ಹಾನಿಯಾದಲ್ಲಿ NDRF/SDRF ಮಾರ್ಗ ಸೂಚಿಯನ್ವಯ ಬಹು ವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್ ಗೆ ರೂ. 28,000 ಗಳನ್ನು ನೀಡುವ ಅವಕಾಶವಿದ್ದು ಗರಿಷ್ಠ 2 ಹೆಕ್ಟರ್ ಪ್ರದೇಶವರೆಗೆ ಪರಿಹಾರ ಧನಕ್ಕೆ ಪರಿಗಣಿಸಲು ಬೆಳೆಗಾರರು ಅರ್ಹರಿರುತ್ತಾರೆ.

**HORTI 285 HGM 2023**

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು
ಹಾಗೂ ದಾವಣಗೆರೆ ಜಿಲ್ಲೆ ಉಸ್ತುವಾರಿ ಸಚಿವರು